ಶ್ರೀ ಬಸನಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ನನಗೆ ಉತ್ತರ ದೊರಕದೆ ಪರಿಶಿಷ್ಟ ಜಾತಿಗೆ ನಮ್ಮ ತಾಲ್ಲೂಕಿನ ಗುರಿ ಎಷ್ಟಿತ್ತು, ಆ ಗುರಿಯನ್ನು ಮುಟ್ಟಿದ್ದೀರೋ, ಇಲ್ಲವೋ ಎಂಬುದು ನನಗೆ ಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿಗೆ ಗುರಿ ಎನ್ನುವಂಥಾದ್ದು ಹೇಳುವುದು ಸ್ವಲ್ಪ ಕಷ್ಟವಾಗಿದೆ. ಅವರಿಗೆ ಏನೇನು ಬೇಕು, ಎಷ್ಟು ಮಾಡಿದ್ದೇವೆ, ಯಾವ ಯಾವ ಸ್ಕೀಮ್ ಎಂದು ದೊಡ್ಡ ಪಟ್ಟಿಯನ್ನು ನಾನು ಕೊಟ್ಟಿದ್ದೇನೆ. ಆದರೂ ಸಹ ಅವರು ಎಷ್ಟು ಗುರಿಯನ್ನು ಇಟ್ಟುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಅದರ ಮಾಹಿತಿ ನನ್ನ ಹತ್ತಿರ ಸದ್ಯಕ್ಕೆ ಇಲ್ಲ. ಮಾನ್ಯ ಸದಸ್ಯರಿಗೆ ನಾನು ಕಳುಹಿಸಿ ಕೊಡುತ್ತೇನೆ.

ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ ಪೌರ ಸೌಲಭ್ಯ

1319 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ -ಧಾರವಾಡ ಮಹಾನಗರ ಸಭೆಯು ನಾಗರೀಕರಿಗೆ ಕಲ್ಪಿಸಿಕೊಡುವ ಪೌರ ಸೌಲಭ್ಯ ಖಾಸಗಿಯವರಿಗೆ ವಹಿಸಲಾಗುತ್ತಿದೆಯೇ;*

ಆ) *ಹಾಗಿದ್ದಲ್ಲಿ ಇದಕ್ಕೆ ಅನುಸರಿಸಿದ ಕ್ರಮ ಯಾವುದು;*

ಇ) *ಮಹಾನಗರಸಭೆಗೆ ಕಡಿಮೆ ಇರುವ ಸಿಬ್ಬಂದಿ ಎಷ್ಟು; ಅವುಗಳನ್ನು ಭರ್ತಿ ಮಾಡಲಾಗುವುದೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಪ್ರಾಯೋಗಿಕವಾಗಿ ಮಹಾನಗರಪಾಲಿಕೆಯ ಕೆಲವು ವಿಭಾಗಗಳ ಪೌರ ಸೌಲಭ್ಯ ಸೇವೆಯನ್ನು ಖಾಸಗಿಯವರಿಗೆ ವಹಿಸಲಾಗಿದೆ.

ಆ) ಬಹಿರಂಗ ಟೆಂಡರ್ ಮುಖಾಂತರ

ಇ) ಉದ್ಭವಿಸುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್ (ಶ್ರೀ ಅಶೋಕ್ ಕಾಟವೆ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಹಾ ನಗರದಲ್ಲಿ ಈ ಸ್ವಚ್ಛತಾ ಕಾರ್ಯಕ್ರಮದ ಅಂಗವಾಗಿ ಕೆಲವೊಂದು ಕಂಟ್ರಾಕ್ಟಗಳನ್ನು ಖಾಸಗಿಯವರಿಗೆ ಕೊಡುತ್ತಿದ್ದಾರೆ. ಇದು ಒಂದು ಪ್ರಯೋಗಾತ್ಮಕವಾಗಿ ಕೊಡುತ್ತಿದ್ದಾರೆ. ಅದು ಎಷ್ಟು ಯಶಸ್ವಿಯಾಗಿದೆ? ಅದನ್ನು ಇಡೀ ಮಹಾ ನಗರಕ್ಕೆ ಅನ್ವಯಿಸಲಾಗಿದೆಯೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟ ಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪ್ರಯೋಗಾತ್ಮಕವಾಗಿ ಹುಬ್ಬಳ್ಳಿಯಲ್ಲಿ ನಾವು ಇದನ್ನು ಮಾಡುತ್ತಿದ್ದೇವೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆಯೊ ಅದನ್ನು ನೋಡಿ ಬೇರೆ ಕಡೆಗೆ ಉಪಯೋಗ ಮಾಡಬಹುದು. ಆ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. ಅದರ ಪೂರ್ಣ ವರದಿ ಬಂದಮೇಲೆ ಎಷ್ಟೆಷ್ಟು ಯಶಸ್ವಿಯಾಗುತ್ತದೆ, ನೋಡೋಣ, ನಂತರ ಬೇರೆ ಕಡೆಗೆ ವಿಸ್ತರಣೆ ಮಾಡೋಣ.

ಶ್ರೀ ಜಗದೀಶ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿಲ್ಲ. ಈಗ ಕೆಲವು ಕಡೆ ಕಂಟ್ರಾಕ್ಟ ಕೊಟ್ಟು ಸ್ವಚ್ಛತಾ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ, ಅದು ಯಶಸ್ವಿ ಆಗಿದೆಯೋ ಇಲ್ಲವೊ ಎಂಬುದನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಸ್ಪಷ್ಟವಾಗಿ ಉತ್ತರ ಹೇಳುತ್ತಿಲ್ಲ.

ಅಧ್ಯಕ್ಷರು : ನೀವು ಈ ಕಡೆ ತಿರುಗಿಕೊಂಡು ಹೇಳಿ, ನಾನು ಎಷ್ಟು ಸ್ಪಷ್ಟವೆಂದು ಹೇಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಈಗ ಪ್ರಾಯೋಗಿಕವಾಗಿ ಕೆಲವೊಂದು ಕಡೆ ಮಾಡುತ್ತಿದ್ದೇವೆ. ಕೆಲವು ಕಡೆ ಇದ್ದ ಸಿಬ್ಬಂದಿ ವರ್ಗವೇ ಸರಿಯಾಗುತ್ತದೆ. ಕೆಲವು ಕಡೆ ಕಂಟ್ರಾಕ್ಟ್ ಬೇಸಿಸ್ ಮೇಲೆ ನಾವು ಕೊಡುತ್ತಿದ್ದೇವೆ. ಈ ಕಂಟ್ರಾಕ್ಟ್‌ದಾರರಿಂದ ಓಣಿಗಳಲ್ಲಿ ಒಳ್ಳೆಯ ಸ್ವಚ್ಛತಾ ಕಾರ್ಯವಾಗುತ್ತಿದೆ. ಆ ದೃಷ್ಟಿಯಿಂದ ಇದೇ ರೀತಿಯಾದರೆ ಬೇರೆ ಕಡೆಗೂ ಪ್ರಾರಂಭ ಮಾಡುತ್ತೇವೆ.

ಹುಬ್ಬಳ್ಳಿ ನಗರಕ್ಕೆ ಒಳಚರಂಡಿ ಯೋಜನೆ

184 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ ನಗರದ ಒಳಚರಂಡಿ ಯೋಜನೆ ಅಳವಡಿಸಲಾಗಿರುವ ಪ್ರದೇಶಗಳೆಷ್ಟು ?

ಆ) ನಗರದ ಉಳಿದ ಭಾಗ ಪ್ರದೇಶ ಈ ಯೋಜನೆ ಅಳವಡಿಸದೇ ಇರಲು ಕಾರಣವೇನು ?

ಇ) ಸರ್ಕಾರ ಇದಕ್ಕೆ ಕೈಕೊಂಡ ಕ್ರಮಗಳೇನು ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಶೇ. 65 ರಷ್ಟು ಪ್ರದೇಶಗಳಲ್ಲಿ ಈ ಯೋಜನೆ ಅಳವಡಿಸಲಾಗಿದೆ.

ಆ) ಉಳಿದ ಪ್ರದೇಶಗಳಿಗೂ ಒಳಚರಂಡಿ ಯೋಜನೆ ವ್ಯವಸ್ಥೆಯನ್ನು ಅಳವಡಿಸಲು 1988-89ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 5,342 ಲಕ್ಷ ರೂ.ಗಳಿಗೆ ಅಂದಾಜನ್ನು ತಯಾರಿಸಲಾಗಿದ್ದು ಅದಕ್ಕೆ ಇನ್ನೂ ಮಂಜೂರಾತಿ ದೊರೆತಿಲ್ಲದಿರುವುದರಿಂದ ಈ ಯೋಜನೆಯನ್ನು ಅಳವಡಿಸಲಿಕ್ಕೆ ಆಗಿಲ್ಲ.

ಇ) ಈಗ ಈ ಯೋಜನೆಯ ಅಂದಾಜನ್ನು ಪರಿಷ್ಕರಿಸಿದಲ್ಲಿ ರೂ. 8400 ಲಕ್ಷಗಳಾಗಬಹುದು ವಿಶ್ವಬ್ಯಾಂಕ್ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದಂತಹ ಉತ್ತರದಲ್ಲಿ ಹುಬ್ಬಳ್ಳಿ ನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಸಲುವಾಗಿ 1988-89ರಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 5,342 ಲಕ್ಷ ರೂಪಾಯಿಗಳ ಅಂದಾಜಿನ ಸಾಲಕ್ಕಾಗಿ ತೆಗೆದುಕೊಂಡರು. ಮುಂದೆ ಅದು ಯಾವುದೇ ರೀತಿಯ ತ್ವರಿತ ಗತಿಯಲ್ಲಿ ಫಾಲೊ ಅಪ್ ಆಗದೆ ಇದ್ದುದರಿಂದ ಇಲ್ಲಿಯವರೆಗೆ ಈ ಸಾಲ ಮಂಜೂರು ಆಗಿಲ್ಲ. ಇವತ್ತು ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರ ರಾಜ್ಯದಲ್ಲೇ ಎರಡನೆಯ ಮಹಾನಗರವಾಗಿ ಮತ್ತು 1991 ರಲ್ಲಿ ಜನಗಣತಿಯ ಪ್ರಕಾರ, ಆರು ಲಕ್ಷದ 42 ಸಾವಿರ ಜನಸಂಖ್ಯೆ ಇರುವಂಥಾದ್ದು, ಈ ಎಂಟು ಲಕ್ಷ ಜನಸಂಖ್ಯೆಯನ್ನು ದಾಟಿದೆ. ಹೀಗಾಗಿ ಕೆಲವೊಂದು ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ಇವತ್ತು ಹುಬ್ಬಳ್ಳಿ ನಗರ ಬೆಳೆಯುತ್ತಿದೆ. ಗೋಕುಲ್ ರೋಡ್ ಎಕ್ಸ್‌ಟೆನ್‌ಷನ್ ಬೆಳೆಯುತ್ತಾ ಇದೆ. ಸೊಲ್ಲಾಪುರ ರಸ್ತೆ ಬೆಳೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಇಡೀ ನಗರದಲ್ಲಿ ಶೇ. 65 ಮಾತ್ರ ಒಳಚರಂಡಿ ವ್ಯವಸ್ಥೆ ಆಗಿದೆ. ಹುಬ್ಬಳ್ಳಿ ಧಾರವಾಡ ನಗರದಲ್ಲೂ ಸಹಿತ ಮಹಾ ನಗರ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಇವತ್ತು ಕ್ಯಾನ್ಸರ್ ಆಸ್ಪತ್ರೆಯ ಸುತ್ತಲೂ ಇದ್ದಂತಹ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯ ಸಮಸ್ಯೆ ಉಂಟಾಗಿದೆ. ಇಂತಹ ಹಲವಾರು ಸಮಸ್ಯೆಗಳಿಂದ ಜನರಿಗೆ ಸಾರ್ವಜನಿಕವಾದ ಆರೋಗ್ಯಕ್ಕೆ ಧಕ್ಕೆಯುಂಟಾಗಿರುವಂತಹ ಪರಿಸ್ಥಿತಿ ಬಂದಿದೆ.